2. ಈ ಮಾಸ್ಟರ್ ಪ್ಲಾನನ್ನು ಅನುಷ್ಠಾನಗೊಳಿಸಲು ಜೋಗ್ ಅಭಿವೃದ್ಧಿ ನಿಗಮವನ್ನು ರಚಿಸಲು ಸರ್ಕಾರವು ತೀರ್ಮಾನಿಸಿರುತ್ತದೆ.

3. ನಿಗಮ ರಚನೆಯಾಗುವವರೆಗೂ ಹಾಲಿ ಇರುವ ಜೋಗ್ ಅಭಿವೃದ್ಧಿ ಸಮಿತಿಯು ಈ ನಿಟ್ಟಿನಲ್ಲಿ ಆಗಬೇಕಾದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಗಮನ ನೀಡುತ್ತಿದೆ.

4. ಈ ಪ್ರಾಥಮಿಕ ಕೆಲಸಗಳನ್ನು ಪ್ರಾರಂಭಿಸಲು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಕಾರ್ಯಕಾರಿ ಸಮಿತಿಯನ್ನು ರಚನೆ ಮಾಡಲಾಗಿದೆ.

ಆ) ರೂ. 100.00 ಲಕ್ಷಗಳು.

ಇ) 1. ಪ್ರಾಥಮಿಕ ಕೆಲಸಗಳಿಗೆ ಗಮನ ನೀಡುವುದು ಹಾಗೂ ಕಾರ್ಯಗತಗೊಳಿಸುವುದು.

2. ಮೈಸೂರಿನ ಬೃಂದಾವನ ತೋಟದ ಮಾದರಿಯಲ್ಲಿ ಡ್ಯಾಂ ಬಳಿ ಉದ್ಯಾನವನವನ್ನು ಅಭಿವೃದ್ಧಿಗೊಳಿಸುವುದು.

3. ಶರಾವತಿಯ ಹಿನ್ನೀರಿನಲ್ಲಿ ಸಾಹಸ ಕ್ರೀಡೆಗಳು ಹೌಸ್‌ಬೋಟ್ (ದೋಣಿ ಮನೆ) ಗಳನ್ನು ಅಭಿವೃದ್ಧಿ ಪಡಿಸುವುದು.

ಈ) ಹೌದು.

ಉ) ಪ್ರವಾಸೋದ್ಯಮ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

ಬಯಲು ಸೀಮೆ ಅಭಿವೃದ್ಧಿ ಮಂಡಳಿಯ ಕಾರ್ಯಕ್ರಮಗಳು

3100 - ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) : ಮಾನ್ಯ ಮೀನುಗಾರಿಕೆ ಬಂದರು ಹಾಗೂ ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ಬಯಲುಸೀಮೆ ಅಭಿವೃದ್ಧಿ ಮಂಡಳಿಯಿಂದ 2000-01ನೇ ಸಾಲಿನಲ್ಲಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಬಿಡುಗಡೆಯಾಗಿರುವ ಒಟ್ಟು ಹಣವೆಷ್ಟು?

ಇ) ಮಂಡಳಿಯು ಒಟ್ಟು ಎಷ್ಟು ಕಾಮಗಾರಿಗಳನ್ನು ಮಂಜೂರಾತಿ ಕೊಟ್ಟಿದೆ? ಇದಕ್ಕೆ ತೊಡಗಿಸಿರುವ ಹಣ ಎಷ್ಟು?

ಇ) ಹಳೆಯ ಮತ್ತು ಹೊಸ ಕಾಮಗಾರಿಗಳೆಷ್ಟು ಅದಕ್ಕೆ ಬಿಡುಗಡೆಯಾಗಿರುವ ಹಣ ಎಷ್ಟು?

ಈ) ಈ ಮಂಡಳಿ ನಬಾರ್ಡ್‌ನಿಂದ ಹಣ ತೆಗೆದುಕೊಳ್ಳಲು ಪ್ರಸ್ತಾವನೆ ಇದೆಯೇ ಹಾಗಾದಲ್ಲಿ ಇದರ ರೂಪರೇಖೆಗಳೇನು?

ಶ್ರೀ ಬಿ. ರಮಾನಾಥ್ ರೈ (ಮೀನುಗಾರಿಕೆ ಬಂದರು ಹಾಗೂ ಪ್ರದೇಶಾಭಿವೃದ್ಧಿ ಸಚಿವರು) :

ಆ) 2000-01ನೇ ಸಾಲಿನಲ್ಲಿ ಆಡಳಿತಾತ್ಮಕ ವೆಚ್ಚಕ್ಕಾಗಿ ರೂ. 30.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಆ) 1999-2000ನೇ ಸಾಲಿನಲ್ಲಿ 1109 ಕಾಮಗಾರಿಗಳಿಗೆ ರೂ. 1358.00 ಲಕ್ಷ ರೂ. ಗಳಿಗೆ ಮಂಜೂರಾತಿ ಕೊಟ್ಟಿರುತ್ತದೆ. ಇವುಗಳಲ್ಲಿ 558 ಕಾಮಗಾರಿಗಳಿಗೆ ರೂ. 407.73 ಲಕ್ಷಗಳು ಬಿಡಗಡೆ ಮಾಡಿರುತ್ತದೆ. ಆದ್ದರಿಂದ ಉಳಿದ 551 ಕಾಮಗಾರಿಗಳನ್ನು ರೂ. 950.27 ಲಕ್ಷದ ಹಣದಲ್ಲಿ 2000-01ನೇ ಸಾಲಿನಲ್ಲಿ ತೆಗೆದುಕೊಳ್ಳಲು ನಿರ್ಧರಿಸಲಾಗಿದೆ.

ಇ) 2000-01ನೇ ಸಾಲಿನಲ್ಲಿ 99-2000ನೇ ಸಾಲಿಗೆ ಅನುಮೋದನೆಗೊಂಡ ಕಾಮಗಾರಿಗಳಲ್ಲಿ ಮುಂದುವರಿಸಲು ನಿರ್ಧರಿಸಲಾಗಿದೆ. ಯಾವುದೇ ಹೊಸ ಕಾಮಗಾರಿಗಳನ್ನು ತೆಗೆದುಕೊಂಡಿಲ್ಲ.

ಈ) ಇದೆ. ಆರ್‌ಐಡಿಎಫ್ ಯೋಜನೆಯಡಿ ಒಟ್ಟು ರೂ. 6835.29 ಲಕ್ಷಗಳ ಆರ್ಥಿಕ ನೆರವನ್ನು ನಬಾರ್ಡ್‌ನಿಂದ ಪಡೆಯುವ ಸಲುವಾಗಿ ಮಂಡಳಿಯನ್ನು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು ಈಗಾಗಲೇ ಇದಕ್ಕಾಗಿ ರಚಿಸಲಾಗಿರುವ ಸಚಿವ ಸಂಪುಟದ ಉಪ ಸಮಿತಿಯ ಮುಂದೆ ಪ್ರಸ್ತಾವನೆಯನ್ನು ಮಂಡಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈ ಪ್ರಸ್ತಾವನೆಯ ರೂಪರೇಖೆಗಳು ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಶೇ. 60 ರಡಿಯಲ್ಲಿ ರೂ. 60.00 ಲಕ್ಷಗಳನ್ನು ನಿಗದಿಪಡಿಸಿದ್ದು, ಅದರಲ್ಲಿ ಜಲಾನಯನ ಅಭಿವೃದ್ಧಿ ಕಾಮಗಾರಿಗಳು ಕೆರೆ ನಿರ್ಮಾಣ ಕೆರೆಗಳ ನವೀಕರಣ ಕಾಮಗಾರಿಗಳು ಮತ್ತು ಶೇ.40 ರಡಿಯಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ರೂ. 40.00 ಲಕ್ಷಗಳಂತೆ ನಿಗದಿಪಡಿಸಿದ್ದು, ರಸ್ತೆ ಮತ್ತು ಸೇತುವೆ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳಲ್ಲಿ ಉಳಿದಿರುವ ದಾಸ್ತಾನು

3102 - ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) : ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ಸಕ್ಕರೆ ಕಾರ್ಖಾನೆಗಳಲ್ಲಿ ಬಿಡುಗಡೆಯಾಗದೆ ಉಳಿದಿರುವ ಸಕ್ಕರೆ ಒಟ್ಟು ದಾಸ್ತಾನು ಎಷ್ಟು?*

ಆ) *ಸಕ್ಕರೆ ಬಿಡುಗಡೆಗೆ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳೇನು?*

ಇ) *ಈ ಸಕ್ಕರೆ ಕಾರ್ಖಾನೆಗಳಿಂದ ರೈತರಿಗೆ ಪಾವತಿಸಬೇಕಾದ ಒಟ್ಟು ಬಾಕಿ ಹಣ ಎಷ್ಟು? ಎಷ್ಟು ವರ್ಷಗಳಿಂದ ರೈತರಿಗೆ ಹಣ ಬಿಡುಗಡೆ ಆಗಿಲ್ಲ. ಕಾರಣ ತಿಳಿಸುವುದು.*

ಈ) *ಕೇಂದ್ರ ಸರ್ಕಾರ ಇತ್ತೀಚೆಗೆ ಸಕ್ಕರೆ ರಫ್ತು ನೀತಿಯಿಂದ ರಾಜ್ಯದ ಸಕ್ಕರೆ ಕಾರ್ಖಾನೆಗಳಲ್ಲಿ ಉಳಿದಿರುವ ಎಷ್ಟು ಟನ್ ಸಕ್ಕರೆ ಬಿಡುಗಡೆಯಾಗುವುದು?*

ಉ) *ಸಕ್ಕರೆ ಕಾರ್ಖಾನೆಗಳು ರೈತರು ಬೆಳೆದ ಒಂದು ಟನ್ ಕಬ್ಬಿಗೆ ಈಗ ಕೊಡುತ್ತಿರುವ ಹಣ ಎಷ್ಟು? ಒಂದು ಟನ್ನಿಗೆ ರೂ. 1000 ಗಳನ್ನು ಕೊಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?*